ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 18-01-1970.

***ಸಂಪೂರ್ಣ ಅರ್ಪಣೆ ಮಾಡುವುದರಿಂದ ಆತ್ಮಿಕ ಶಕ್ತಿಯ ಪ್ರಾಪ್ತಿ.***

**(सम्पूर्ण विल करने से विल-पॉवर की प्राप्ति)**

**ಈ** ದಿನ ಏಕೆ ಕರೆಯಲಾಗಿದೆ? ಇಂದು ಬಾಪ್ ದಾದಾ ಏನನ್ನು ನೋಡುತ್ತಿದ್ದಾರೆ? ಒಂದೊಂದು ನಕ್ಷತ್ರವನ್ನು ಯಾವ ರೂಪದಿಂದ ನೋಡುತ್ತಿದ್ದಾರೆ? ನಕ್ಷತ್ರಗಳಲ್ಲಿಯೂ ಯಾವ ವಿಶೇಷತೆ ನೋಡುತ್ತಿದ್ದಾರೆ? ಪ್ರತಿಯೊಬ್ಬ ನಕ್ಷತ್ರದ ಸಂಪೂರ್ಣತೆಯ ಸಮೀಪತೆಯನ್ನು ನೋಡುತ್ತಿದ್ದಾರೆ. ತಾವೆಲ್ಲರೂ ಎಷ್ಟು ಸಂಪೂರ್ಣತೆಗೆ ಸಮೀಪ ತಲುಪಿದ್ದೇವೆ ಎಂದು ತಿಳಿದಿದ್ದೀರಾ? ಸಂಪೂರ್ಣತೆಯ ಸಮೀಪ ತಲುಪುವುದರ ಪರಿಶೀಲನೆ ಏನಾಗಿದೆ? ಅವರು ಎಲ್ಲಾ ಮಾತುಗಳಲ್ಲಿ ಎಲ್ಲಾ ರೀತಿಯಿಂದ, ಎಲ್ಲಾ ರೂಪಗಳಿಂದ ಪರಿಶೀಲಿಸಬಲ್ಲರು. ಇಂದಿನ ದಿನವಿಡೀ ಯಾವ-ಯಾವ ನೆನಪು ಬಂದಿದೆ? ಚಿತ್ರ ಸ್ಮೃತಿಯಲ್ಲಿ ಬಂದಿತ್ತೋ ಅಥವಾ ಚರಿತ್ರೆ ಸ್ಮೃತಿಯಲ್ಲಿ ಬಂದಿತ್ತೋ? ಚಿತ್ರದ ಜೊತೆಗೆ ಮತ್ತೇನಾದರೂ ನೆನಪಿಗೆ ಬಂದಿತ್ತೇ? (ಶಿಕ್ಷಣ, ನಾಟಕ ನೆನಪಿಗೆ ಬಂದವು) ಚಿತ್ರದ ಜೊತೆಗೆ ವಿಚಿತ್ರನೂ ನೆನಪಿಗೆ ಬಂದಿದ್ದರೇ? ಎಷ್ಟು ಸಮಯ ಚಿತ್ರದ ನೆನಪಿನಲ್ಲಿದ್ದಿರಿ, ಎಷ್ಟು ಸಮಯ ವಿಚಿತ್ರನ ನೆನಪಿನಲ್ಲಿದ್ದಿರಿ ಅಥವಾ ಇಬ್ಬರ ನೆನಪೂ ಸೇರಿತ್ತೋ? ವಿಚಿತ್ರನ ಜೊತೆಗೆ ಚಿತ್ರವನ್ನು ನೆನಪು ಮಾಡುವುದರಿಂದ ಸ್ವಯಂ ಚರಿತ್ರವಂತರಾಗುತ್ತೀರಿ. ಒಂದು ವೇಳೆ ಕೇವಲ ಚಿತ್ರ ಮತ್ತು ಚರಿತ್ರೆಯನ್ನು ನೆನಪು ಮಾಡಿದರೆ ಚರಿತ್ರೆಯದೇ ನೆನಪಿರುತ್ತದೆ. **ಆದ್ದರಿಂದ ವಿಚಿತ್ರನ ಜೊತೆಗೆ ಚಿತ್ರ ಮತ್ತು ಚರಿತ್ರೆಯೂ ನೆನಪಿಗೆ ಬರಲಿ,** ಇಂದಿನ ದಿನ ಮತ್ತೇನಾದರೂ ವಿಶೇಷ ಕಾರ್ಯ ಮಾಡಿರುವಿರಾ? ಕೇವಲ ನೆನಪಿನಲ್ಲೇ ಮಗ್ನರಾಗಿದ್ದಿರೋ ಅಥವಾ ನೆನಪಿನ ಜೊತೆಗೆ ಮತ್ತೇನಾದರೂ ಮಾಡಿದ್ದೀರಾ? (ವಿಕರ್ಮ ವಿನಾಶ) ಇದಂತೂ ನೆನಪಿನ ಪರಿಣಾಮವಾಗಿದೆ, ಮತ್ತೆ ಯಾವ ವಿಶೇಷ ಕರ್ತವ್ಯ ಮಾಡಿದಿರಿ? ಪೂರ್ಣ ಒಂದು ವರ್ಷದ ತಮ್ಮ ಚಾರ್ಟ್ ನೋಡಿಕೊಳ್ಳಿರಿ? ಈ ಅವ್ಯಕ್ತ ಶಿಕ್ಷಣ, ಅವ್ಯಕ್ತ ಸ್ನೇಹ ಮತ್ತು ಸಹಯೋಗದ ಫಲಿತಾಂಶವನ್ನು ಪರಿಶೀಲನೆ ಮಾಡಿದ್ದೀರಾ? ಈ ಅವ್ಯಕ್ತ ಸ್ನೇಹ ಮತ್ತು ಸಹಯೋಗದ 12 ತಿಂಗಳ ಪೇಪರ್ ಏನಾಗಿದೆ? ಪರಿಶೀಲನೆ ಮಾಡಿದ ನಂತರವೇ ತಮ್ಮ ಮೇಲೆ ಹೆಚ್ಚು ಗಮನ ಇಟ್ಟುಕೊಳ್ಳಲು ಸಾಧ್ಯ. ಇಂದಿನ ದಿನ ಸ್ವಯಂ ತಾವೇ ತಮ್ಮ ಪೇಪರ್ ಚೆಕ್ ಮಾಡಿಕೊಳ್ಳಬೇಕು. ವ್ಯಕ್ತ ಭಾವದಿಂದ ಅವ್ಯಕ್ತ ಭಾವಕ್ಕೆ ಎಲ್ಲಿಯ ವರೆಗೆ ತಲುಪಿದ್ದೇವೆ ಎಂದು. ಅವ್ಯಕ್ತ ಸ್ಥಿತಿ ಹೆಚ್ಚಿದ್ದರೆ ತಮ್ಮ ನಡತೆಯಲ್ಲಿಯೂ ಅಲೌಕಿಕತೆಯಿರುತ್ತದೆ. ಅವ್ಯಕ್ತ ಸ್ಥಿತಿಯ ಪ್ರಾಯೋಗಿಕ ಗುರುತು ಏನು? ಅಲೌಕಿಕ ನಡತೆ. ಈ ಲೋಕದಲ್ಲಿ ಇರುತ್ತಾ ಎಲ್ಲಿಯವರೆಗೆ ಅಲೌಕಿಕ ಆಗಿದ್ದೀರಿ ಎಂಬುದನ್ನು ಪರಿಶೀಲನೆ ಮಾಡಿಕೊಳ್ಳಿ ಈ ವರ್ಷದ ಮೊದಲ ಪರೀಕ್ಷೆ ಯಾವುದಾಯಿತು? ಈ ನಿಶ್ಚಯದ ಪರೀಕ್ಷೆಯಲ್ಲಿ ಪ್ರತಿಯೊಬ್ಬರೂ ಎಷ್ಟೆಷ್ಟು ಅಂಕಗಳನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಾವೇ ತಿಳಿದಿದ್ದೀರಿ. ನಿಶ್ಚಯದ ಪರೀಕ್ಷೆಯಂತೂ ಆಯಿತು. ಈಗ ಯಾವ ಪರೀಕ್ಷೆಯಾಗಲಿದೆ? ಪರೀಕ್ಷೆಯ ಬಗ್ಗೆ ತಿಳಿದಿದ್ದರೂ ಫೇಲ್ ಆಗುತ್ತಾರೆ. ಕೆಲವರಿಗೆ ಇದು ದೊಡ್ಡ ಪೇಪರ್ ಆಗಿದೆ ಆದರೆ ಇನ್ನು ಕೆಲವರಿಗೆ ಈಗ ದೊಡ್ಡ ಪೇಪರ್ ಬರಲಿದೆ. ಈ ಪೇಪರ್ ನಲ್ಲಿ ಹೇಗೆ ನಿಶ್ಚಯದ ಪರೀಕ್ಷೆಯಾಯಿತೋ, ಹಾಗೆಯೇ ಈಗ ಯಾವ ಪೇಪರ್ ಬರಲಿದೆ? ವ್ಯಕ್ತದಲ್ಲಿ ಇನ್ನೂ ಕೂಡ ಆಸರೆ ಇದೆ. ಮೊದಲೂ ಸಹ ಹೇಗೆ ನಿಮಿತ್ತರಾದ ಸಾಕಾರ ತನುವಿನ ಜೊತೆಯಿದ್ದಿರೋ ಹಾಗೆಯೇ ಈಗಲೂ ನಾಟಕದಲ್ಲಿ ನಿಮಿತ್ತರಾಗಿರುವವರು ಸಾಕಾರದಲ್ಲಿ ಆಶ್ರಯವಾಗಿದ್ದಾರೆ. ಮೊದಲೂ ಕೂಡ ನಿಮಿತ್ತರಾಗಿದ್ದರು, ಈಗಲೂ ನಿಮಿತ್ತರಾಗಿದ್ದಾರೆ. ಈ ಪೂರ್ಣ ಪರಿವಾರದ ಸಾಕಾರ ಜೊತೆ ಬಹಳ ಶ್ರೇಷ್ಠವಾಗಿದೆ. ಅವ್ಯಕ್ತದಲ್ಲಂತೂ ಜೊತೆಗಿದ್ದಾರೆ. ಎಷ್ಟು ಸ್ನೇಹವಿರುತ್ತದೆಯೋ ಅಷ್ಟೇ ಸಹಯೋಗವೂ ಸಿಗುತ್ತದೆ. ಸ್ನೇಹದ ಕೊರತೆಯ ಕಾರಣ ಸಹಯೋಗವೂ ಕಡಿಮೆ ಸಿಗುತ್ತದೆ. ಸಾಕಾರನೊಂದಿಗಿನ ಸ್ನೇಹ ಎಂದರೆ ಇಡೀ ಮಾಲೆಯ ಜೊತೆಗೆ ಸ್ನೇಹ, ಸಾಕಾರನು ಒಂಟಿಯಾಗಿಲ್ಲ. ಪ್ರಜಾಪಿತ ಬ್ರಹ್ಮನ ಜೊತೆಗೆ ಅವರ ಪರಿವಾರವಿದೆ. ಮಾಲೆಯ ಮಣಿಯಲ್ಲವೇ? ಮಾಲೆಯಲ್ಲಿ ಒಂದೇ

ಮಣಿಯಿರುವುದಿಲ್ಲ. ಮಾಲೆಯಲ್ಲಿ ಒಬ್ಬನ ಸ್ಮೃತಿಯ ದಾರದಲ್ಲಿ, ಸ್ನೇಹದಲ್ಲಿ ಪರಿವಾರ ಸಮಾವೇಶಗೊಂಡಿದೆ. ಸ್ನೇಹದ ಸೂತ್ರದಲ್ಲಿ ಮಾಲೆಯಂತೆ ಪೋಣಿಸಲ್ಪಟ್ಟಿದ್ದೀರಿ. ದೈವೀಕುಲವಂತೂ ಭವಿಷ್ಯದಲ್ಲಿದೆ, ಈ ಬ್ರಾಹ್ಮಣ ಕುಲದ ಮಹತ್ವ ಬಹಳಷ್ಟಿದೆ. ಎಷ್ಟು ಬ್ರಾಹ್ಮಣ ಕುಲದೊಂದಿಗೆ ಸ್ನೇಹ ಮತ್ತು ಸಮೀಪತೆ ಇರುವುದೋ ಅಷ್ಟು ದೈವೀ ರಾಜ್ಯದಲ್ಲಿ ಸಮೀಪತೆ ಇರುವುದು, ಸಾಕಾರದಲ್ಲಿ ಯಾವ ಪ್ರತ್ಯಕ್ಷ ಪ್ರಮಾಣವನ್ನು ನೋಡಿದಿರಿ? ಬಾಪ್ ದಾದಾ ಯಾರನ್ನು ಮುಂದಿಟ್ಟರು? ಮಕ್ಕಳನ್ನು. ಏಕೆಂದರೆ ಮಕ್ಕಳಿಲ್ಲದೇ ಮಾತಾಪಿತರ ಹೆಸರು ಪ್ರಖ್ಯಾತಿಗೊಳ್ಳುವುದಿಲ್ಲ. ಸಾಕಾರದಲ್ಲಿ ಹೇಗೆ ಕರ್ಮ ಮಾಡಿ ತೋರಿಸಿದರು, ಅದನ್ನೇ ಅನುಸರಿಸಬೇಕು. ಇಲ್ಲಿ ಪೇಪರ್ ಮೊದಲೇ ತಿಳಿಸಲಾಗುವುದು, ನಿಶ್ಚಯದ ಪೇಪರ್ ಅಂತೂ ಆಯಿತು, ಆದರೆ ಈಗ ಪ್ರತಿಯೊಬ್ಬರ ಸ್ನೇಹ, ಸಹಯೋಗ ಮತ್ತು ಶಕ್ತಿಯ ಪೇಪರ್ ಆಗಬೇಕಾಗಿದೆ. ಈಗ ತಮ್ಮ ಕಲ್ಪದ ಹಿಂದಿನ ಚಿತ್ರ ಪ್ರತ್ಯಕ್ಷವಾಗುವ ಸಮಯ ಸಮೀಪ ಬರುತ್ತಿದೆ. ಆನೇಕ ಪ್ರಕಾರದ ಸಮಸ್ಯೆಗಳ ಪರಿವರ್ತನೆಗಾಗಿ ಬೆರಳು (ಸಹಯೋಗ) ಕೊಡಬೇಕಾಗಿದೆ. ಕಲಿಯುಗದ ಪರ್ವತವಂತೂ ಪಾರಾಗಲೇಬೇಕು ಆದರೆ ಈ ವರ್ಷದಲ್ಲಿ ಮನದ ಸಮಸ್ಯೆಗಳು, ತನುವಿನ ಸಮಸ್ಯೆಗಳು, ವಾಯುಮಂಡಲದ ಸಮಸ್ಯೆಗಳು ಸರ್ವ ಸಮಸ್ಯೆಗಳ ಪರ್ವತಕ್ಕೆ ಸ್ನೇಹ ಮತ್ತು ಸಹಯೋಗದ ಬೆರಳು ಕೊಡಬೇಕು. ತನುವಿನ ಸಮಸ್ಯೆಯೂ ಬರಲಿದೆ. ಲೌಕಿಕ ಸಂಬಂಧದಲ್ಲಿ ಅಂತೂ ಪಾಸಾಗಿದ್ದೀರಿ. ಆದರೆ ಈ ಅಲೌಕಿಕ ಸಂಬಂಧದ ಮೂಲಕವೂ ಚಿಕ್ಕ ಪುಟ್ಟ ಸಮಸ್ಯೆಗಳು ಬರುವವು ಆದರೆ ಈ ಎಲ್ಲಾ ಸಮಸ್ಯೆಗಳನ್ನು ಪೇಪರ್ ಎಂದು ತಿಳಿಯಿರಿ, ಇವು ಪ್ರಯೋಗದ ಮಾತುಗಳಲ್ಲ. ಪೇಪರ್ ಎಂದು ತಿಳಿದು ಪಾಸ್ ಮಾಡಿದರೆ ಪಾಸಾಗಿ ಬಿಡುವಿರಿ, ಪೇಪರ್ ಮೊದಲೇ ಪ್ರಕಟವಾದರೂ ಎಷ್ಟು ಜನ ಪಾಸಾಗುತ್ತಾರೆ ಎಂದು ಈಗ ನೋಡಬೇಕು. ನಂತರ ಈ ಪೇಪರ್ ನ ಫಲಿತಾಂಶವನ್ನು ಹೇಳುತ್ತೇವೆ. ಈ ಸಮಯದಲ್ಲಿ ತಾವು ಆತ್ಮಿಕ ಶಕ್ತಿಯನ್ನು ಧಾರಣೆ ಮಾಡಿ ಕೊಳ್ಳಬೇಕು. ಇನ್ನೂ ಆತ್ಮಿಕ ಶಕ್ತಿ (ವಿಲ್ ಪವರ್) ಬಂದಿಲ್ಲ. ಯೋಗ್ಯತೆಯನುಸಾರ ಶಕ್ತಿಯಿದೆ.

ಆತ್ಮಿಕ ಶಕ್ತಿ ಹೇಗೆ ಬರುತ್ತದೆ? ಆತ್ಮಿಕ ಶಕ್ತಿ ಬರಲು ಸಾಧನ ಯಾವುದು? ಆತ್ಮಿಕ ಶಕ್ತಿಯ ಕೊರತೆ ಏಕೆ? ಅದರ ಕಾರಣ ತಿಳಿದಿದೆಯೇ? ನೆನಪಿನ ಕೊರತೆಯಾದರೂ ಏಕೆ ಇದೆ? ಆತ್ಮಿಕ ಶಕ್ತಿ ಹೇಗೆ ಬಂತು ಎಂದು ತಂದೆಯು ಸಾಕಾರದಲ್ಲಿ ಕರ್ಮ ಮಾಡಿ ತೋರಿಸಿದರು. ಮೊಟ್ಟಮೊದಲು ಯಾವ ಹೆಜ್ಜೆಯನ್ನು ಇಟ್ಟರು? ಎಲ್ಲವನ್ನು ಅರ್ಪಣೆ ಮಾಡಿದ್ದೀರಾ? ವಿಲ್ ಮಾಡುವುದರಲ್ಲಿ ಅವರು ತಡವೇ ಮಾಡಲಿಲ್ಲ? ಎಲ್ಲಿಯವರೆಗೆ ಅಂತರಂಗ ಬಹಿರಂಗದ ಕೆಟ್ಟತನವನ್ನು ಸಂಪೂರ್ಣ ಅರ್ಪಣೆ ಮಾಡುವುದಿಲ್ಲವೋ ಅಲ್ಲಿಯವರೆಗೆ ಆತ್ಮಿಕ ಶಕ್ತಿ ಬರಲು ಸಾಧ್ಯವಿಲ್ಲ. ಸಾಕಾರ ತಂದೆ ಏನಾದರೂ ಯೋಚನೆ ಮಾಡಿದರೆ? ಹೇಗಾಗುವುದು, ಏನಾಗುವುದು, ಇದನ್ನು ಎಂದಾದರೂ ಯೋಚಿಸಿದ್ದರೇ? ತಕ್ಷಣದ ಬಲಿ ಮತ್ತು ಒದ್ದಾಡಿದ ಬಲಿಗೆ ಹೇಗೆ ಅಂತರವಿದೆಯೋ ಹಾಗೆ ಯೋಚನೆ ಮಾಡಿ ಅರ್ಪಣೆ ಮಾಡಿದರೆ ಅದರ ಫಲ ಅಷ್ಟು ಬರುವುದಿಲ್ಲ. ಮೊದಲು ಯಾರು ಸ್ವೀಕಾರವಾಗುತ್ತಾರೆ? ಮೊದಲ ನಂಬರ್ ನ ಶಕ್ತಿ, ಮೊದಲು ಸ್ವೀಕಾರವಾಗುವವರಿಗೆ ಸಿಗುತ್ತದೆ. ಈ ಮಾತಿನ ಬಗ್ಗೆ ಯೋಚಿಸಿ. ಬಾಪ್ ದಾದಾ ವರ್ತಮಾನದ ಜೊತೆಗೆ ಭವಿಷ್ಯವನ್ನೂ ತಿಳಿದಿದ್ದಾರೆ. ಭವಿಷ್ಯದ ಕರ್ಮಬಂಧನದ ಹಗ್ಗಗಳನ್ನು ಕತ್ತರಿಸುವುದು ನಮ್ಮ ಕರ್ತವ್ಯವಾಗಿದೆ. ಯಾವುದೇ ಸಂಕೋಲೆಯನ್ನು  ಕತ್ತರಿಸಿಲ್ಲವೆಂದರೆ ಮನಸ್ಸಿನಲ್ಲಿ ಸೆಳೆತವಿರುತ್ತದೆ. ಆದ್ದರಿಂದ ಸಂಕೋಲೆಗಳನ್ನು ಕತ್ತರಿಸಲು ನಿಂತಿದ್ದೇವೆ. ಸಂಕೋಲೆಗಳು ಕತ್ತರಿಸಲ್ಪಟ್ಟಿದ್ದರೆ ಯಾರಾದರೂ ಉಳಿಯುವರೇ? ಬಿಡುಗಡೆಯಾದವರನ್ನು ಎಂದಿಗೂ, ಯಾರೂ, ಯಾವ ಬಂಧನದಲ್ಲಿಯೂ ತಡೆಯುವುದಿಲ್ಲ.

ಇಂದಿನ ದಿನ ಏನು ಮಾಡಬೇಕು ಮತ್ತು ಮುಂದಿನ ವರ್ಷ ಯಾವ ತಯಾರಿ ಮಾಡುವುದು ಎಂಬುವುದನ್ನು ಎಲ್ಲರೂ ನೆನಪಿಟ್ಟುಕೊಳ್ಳಬೇಕು. ವಿದೇಹಿಯನ್ನು ಜೀವನ ಸಂಗಾತಿಯನ್ನಾಗಿ ಮಾಡಿಕೊಂಡರೆ ವಿದೇಹಿಯಾಗಲು ಸಹಯೋಗ ಸಿಗುತ್ತದೆ. ವಿದೇಹಿಯನ್ನು ಜೀವನ ಸಂಗಾತಿಯನ್ನಾಗಿ ಮಾಡಿಕೊಳ್ಳದಿದ್ದರೆ ವಿದೇಹಿಯಾಗುವುದರಲ್ಲಿ ಸಹಯೋಗ ಕಡಿಮೆ ಸಿಗುತ್ತದೆ, ಸಫಲತೆ ಕಡಿಮೆ ಕಂಡುಬರುತ್ತಿದೆ ಎಂದಾಗ ವಿದೇಹಿಯನ್ನು ಜೀವನ ಸಂಗಾತಿಯನ್ನಾಗಿ ಮಾಡಿಕೊಂಡಿಲ್ಲವೆಂದು ತಿಳಿದುಕೊಳ್ಳಬೇಕು. ಕಠಿಣ ಮಾತನ್ನು ಸಹಜ ಮಾಡುವುದಕ್ಕೆ ಅದ್ಭುತವೆಂದು ಹೇಳುತ್ತಾರೆ. ಸಹಜ ಮಾತುಗಳನ್ನು ದಾಟುವುದು ಅದ್ಭುತವೇನಲ್ಲ.

ಕಷ್ಟಗಳನ್ನು ಪಾರು ಮಾಡುವುದು ಅದ್ಭುತವಾಗಿದೆ. ಕಷ್ಟಗಳನ್ನು ಕಷ್ಟವೆಂದು ತಿಳಿಯದೆ ನಡೆಯುವುದೇ ಅದ್ಭುತವಾಗಿದೆ. ಒಂದು ವೇಳೆ ಕಷ್ಟಗಳಲ್ಲಿ ಸ್ವಲ್ಪವಾದರೂ ಖಿನ್ನರಾದರೆ ಏನಾಗುವುದು? ಒಂದು ಕ್ಷಣದಲ್ಲಿ ವ್ಯಾಪಾರ ಮಾಡುವವರು ಎಂದೂ, ಎಲ್ಲಿಯೂ ಸಿಕ್ಕಿಹಾಕಿಕೊಳ್ಳುವುದಿಲ್ಲ. ವೇಗವಾಗಿ ಹೋಗುವವರು ಎಲ್ಲಿಯೂ ಸಿಕ್ಕಿಹಾಕಿಕೊಳ್ಳುವುದಿಲ್ಲ, ಸಿಕ್ಕಿಹಾಕಿಕೊಳ್ಳುವವರು ವೇಗವಾಗಿ ಹೋಗಲಾಗುವುದಿಲ್ಲ. ಅಂತಿಮ ಸ್ಥಿತಿಯನ್ನು ನೋಡಿ ತೀವ್ರತೆಯಿಂದ ಹೋಗಬೇಕು. ಈಗಲೂ ತೀವ್ರವಾಗಿ ಹೋಗಲು ಅವಕಾಶವಿದೆ. ಕೇವಲ ಹೈಜಂಪ್ ನ ಅವಶ್ಯಕತೆ ಯಿದೆ. ಅಂತಿಮದಲ್ಲಿ ತೀವ್ರವಾಗಿ ಹೋಗಲು ಸಾಧ್ಯವಿಲ್ಲ. ಒಳ್ಳೆಯದು.

ಅವ್ಯಕ್ತ ಮುರಳಿ 18-06-1970.

**ಸಂಪೂರ್ಣ ಅರ್ಪಣೆಯಿಂದ ಆತ್ಮಿಕ ಶಕ್ತಿಯ ಪ್ರಾಪ್ತಿ.**

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಂಪೂರ್ಣತೆಗೆ ಸಮೀಪವಾಗಿರುವ ನಕ್ಷತ್ರ.

2. ನಾನು ಎಲ್ಲಾ ವಿಷಯಗಳನ್ನು, ಎಲ್ಲಾ ರೀತಿಯಿಂದ, ಎಲ್ಲಾ ರೂಪಗಳಿಂದ ಪರಿಶೀಲಿಸಬಲ್ಲ ಸಂಪೂರ್ಣ ಸ್ವರೂಪ.

3. ನಾನು ವಿಚಿತ್ರ ನೊಂದಿಗೆ (ಶಿವ ತಂದೆ), ಚಿತ್ರನನ್ನು (ಬ್ರಹ್ಮ ತಂದೆ) ಮತ್ತು ಚರಿತ್ರೆಯನ್ನು ಸ್ಮೃತಿ ಮಾಡುವ ಚರಿತ್ರವಂತನು.

4. ನಾನು ಸ್ಮೃತಿಯಿಂದ ವಿಕರ್ಮಗಳನ್ನು ವಿನಾಶ ಮಾಡಿದ್ದೇನೆ.

5. ನಾನು ನನ್ನ ಮೇಲೆ ಗಮನವಿಟ್ಟುಕೊಂಡು ಅವ್ಯಕ್ತ ಶಿಕ್ಷಣ, ಅವ್ಯಕ್ತ ಸ್ನೇಹ ಮತ್ತು ಸಹಯೋಗದ ಫಲಿತಾಂಶವಾಗಿ, ವ್ಯಕ್ತವನ್ನು ಅವ್ಯಕ್ತದಲ್ಲಿ ಪರಿವರ್ತಿಸಿಕೊಂಡು ಅಲೌಕಿಕ ನಡವಳಿಕೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

6. ನಾನು ನಿಶ್ಚಯ ಎಂಬ ಪರೀಕ್ಷೆಯಲ್ಲಿ ಪಾಸ್ ವಿತ್ ಆನರ್ ಆಗಿದ್ದೇನೆ.

7. ನಾನು ಇಡೀ ಪರಿವಾರದೊಂದಿಗೆ ಸ್ನೇಹದಿಂದ ಇರುವ ಮಾಲೆಯ ಮಣಿ.

8. ನಾನು ಒಬ್ಬನ ನೆನಪಿನ ದಾರದಿಂದ ಸ್ನೇಹದಲ್ಲಿ ಪೋಣಿಸಲ್ಪಟ್ಟಿರುವ ಮಾಲೆಯ ಮಣಿ.

9. ನಾನು ಬ್ರಹ್ಮಾ ತಂದೆಯ ಸಮಾನ... ಆತ್ಮಿಕ ಸಹೋದರರೆಲ್ಲರನ್ನು ಮುಂದೆ ಇಟ್ಟು ಸೇವೆಯನ್ನು ಮಾಡಿ ತಂದೆ ತಾಯಿಯನ್ನು ಪ್ರತ್ಯಕ್ಷ ಮಾಡಿದ್ದೇನೆ.

10. ನಾನು ಸ್ನೇಹ, ಸಹಯೋಗ ಮತ್ತು ಶಕ್ತಿಯ ಪರೀಕ್ಷೆಯಲ್ಲಿ ಪಾಸ್ ವಿತ್ ಆನರ್ ಆಗಿದ್ದೇನೆ.

11. ನಾನು ಮಾನಸಿಕ ಸಮಸ್ಯೆಗಳು, ತನುವಿನ ಸಮಸ್ಯೆಗಳು, ವಾಯುಮಂಡಲದ ಸಮಸ್ಯೆಗಳು, ಅಲೌಕಿಕ ಸಂಬಂಧಗಳ ಸಮಸ್ಯೆಗಳು ಎಂಬ ಕಲಿಯುಗೀ ಪರ್ವತಕ್ಕೆ ಸ್ನೇಹ ಮತ್ತು ಸಹಯೋಗ ಎಂಬ ಬೆರಳನ್ನು ಕೊಟ್ಟು ಈ ಪರೀಕ್ಷೆಯಲ್ಲಿ ಪಾಸ್ ಆಗಿದ್ದೇನೆ.

12. ನಾನು ತಂದೆಯ ಸಮಾನವಾಗಿ ನನ್ನಲ್ಲಿ ಅಂತರಂಗ-ಬಹಿರಂಗದ ಕೆಟ್ಟತನವನ್ನು ಸಂಪೂರ್ಣವಾಗಿ ಅರ್ಪಣೆ ಮಾಡಿರುವ ಆತ್ಮಿಕ ಶಕ್ತಿ ಸ್ವರೂಪ.

13. ನಾನು ಕರ್ಮಬಂಧನದ ಹಗ್ಗಗಳನ್ನು ಕತ್ತರಿಸಿಕೊಂಡಿರುವ ಕರ್ಮ ಬಂಧನಮುಕ್ತ ಸ್ವರೂಪ.

14. ನಾನು ವಿದೇಹಿಯನ್ನು ಜೀವನ ಸಂಗಾತಿಯಾಗಿ ಮಾಡಿಕೊಂಡು ವಿದೇಹಿಯಾಗಿ ಸಹಜವಾಗಿ ಸಫಲತೆಯನ್ನು ಪಡೆದಿದ್ದೇನೆ.

15. ನಾನು ಕಷ್ಟವನ್ನು ಸಹಜ ಮಾಡಿಕೊಂಡು, ಹೈಜಂಪ್ ಮಾಡಿ ಅಂತಿಮ ಸ್ಥಿತಿಗೆ ತಲುಪಿದ್ದೇನೆ.